**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ19.01.2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಪಿ ವಕೀಲರಿಂದ**

ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ವಾದಿ ಹೂಡಿದ ಈ ದಾವೆಯನ್ನು ತಿಳಿದುಕೊಂಡಿಲ್ಲ. ಅವರು ಹಾಜರುಪಡಿಸಿರುವ ದಾಖಲಾತಿಯನ್ನು ತಿಳಿದುಕೊಂಡಿಲ್ಲ. ನಾನು ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ. ವಾದಿ ನನ್ನ ಜಮೀನನ್ನು ಅವರಿಗೆ ಮಾರಾಟ ಮಾಡುವಂತೆ ಕೇಳಿರುತ್ತಾರೆ. ಅವರು ಆ ರೀತಿ ಕೇಳದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ದಾವೆಯಲ್ಲಿ ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಲು ಅರ್ಜಿ ಹೂಡಿ ಆ ಪ್ರಕಾರ ಸರ್ವೆಯಾಗಿರುತ್ತದೆ ಎಂದರೆ ಸರಿ. ನ್ಯಾಯಾಲಯದ ನಿಯೋಗಿ ಎರಡು ಪಕ್ಷಗಾರರಿಗೆ ನೋಟೀಸ ನೀಡಿ ದಿ 21.10.2024 ರಲ್ಲಿ ಸ್ಥಳ ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿ. ಅದಕ್ಕೆ ನಾನು ಸಹಿ ಮಾಡಿರುತ್ತೇನೆಂದರೆ ಸರಿ. ನಾನು ಸರ್ವೆ ವರದಿಯನ್ನು ನೋಡಿರುತ್ತೇನೆ. ಸರ್ವೆ ವರದಿಯಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಪ್ರತ್ಯೇಕ ಸ್ಕೆಚ್ ಮಾಡಿರುತ್ತಾರೆ ಎಂದರೆ ಸರಿ.

ವರದಿಯಲ್ಲಿ ಯಾವುದೇ ಒತ್ತುವರಿಯಾಗಿರುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ನಿಯೋಗಿಯವರು ಸರ್ವೆ ಮಾಡಲು ಮಾತ್ರ ಬಂದಿದ್ದು, ಒತ್ತುವರಿ ಬಗ್ಗೆ ತೋರಿಸಲು ಆದೇಶ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಸಮಕ್ಷಮ ಎರಡೂ ಆಸ್ತಿಗಳ ಅಳತೆ ಕಾರ್ಯ ಮಾಡಿರುತ್ತಾರೆಂದರೆ ಸರಿ. ಯಾವುದೇ ಒತ್ತುವರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಒತ್ತುವರಿಯಾಗಿದ್ದರೆ ಅದನ್ನು ನಮೂದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸರ್ವೆ ವರದಿಯನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸಿರುವುದಿಲ್ಲ. ನಾನು ದಿಃ 26.01.2019 ರಂದು ನನ್ನ ಜಮೀನಿನ ಸರ್ವೆ ಮಾಡಿಸಿರುತ್ತೇನೆ. ಜನವರಿ 26 ರಂದು ಗಣರಾಜ್ಯೋತ್ಸವ ಪ್ರಯುಕ್ತ ಸಾರ್ವಜನಿಕ ರಜೆ ಇರುತ್ತದೆ ಎಂದರೆ ಸರಿ. ಆದ್ದರಿಂದ ಯಾವುದೇ ಸರ್ವೆ ಕಾರ್ಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಸರ್ವೆ ಮಾಡಿಸುವಾಗ ಬಾಜುದಾರರಿಗೆ ನೋಟೀಸ ನೀಡಿರುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ 26.01.2019 ರ ಸರ್ವೆ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ವಾದಿಯ ವಿರುದ್ದ ಅಸಲು ದಾವ ನಂಬರ್

117/2021 ಎಂಬ ದಾವೆ ಹೂಡಿರುತ್ತೇನೆ ಎಂದರೆ ಸರಿ. ದಿಃ 13.06.2021 ರಂದು ನಾನು ಸದರಿ ದಾವೆಯನ್ನು ವಾಪಸ್ಸು ಪಡೆದಿರುತ್ತೇನೆಂದರೆ ಸರಿ. ಅದೇ ದಿನ ಅಸಲು ದಾವ ನಂಬರ್ 157/2023 ರಂತೆ ನನ್ನ ಮಗ ವಾದಿಯ ವಿರುದ್ದ ದಾವ ದಾಖಲು ಮಾಡಿರುತ್ತಾರೆಂದರೆ ಸರಿ. ಸಾಕ್ಷಿಗೆ ಈಗ ಅ ದಾ ನಂ 157/2023 ರ ವಾದ ಪತ್ರ ಮತ್ತು ಪ್ರತಿವಾದ ಪತ್ರ ತೋರಿಸಲಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ತಾತ್ಕಲಿಕ ಆದೇಶ ಆದ ನಂತರ ಪೊಲೀಸ ರಕ್ಷಣೆಗಾಗಿ ಒಂದು ಅರ್ಜಿ ಹೂಡಿದ್ದರು ಎಂದರೆ ಸರಿ. ಸದರಿ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ ಎಂದರೆ ಸರಿ. ಸ ನಂ 1/5 ಆಸ್ತಿಯ ದಾಖಲಾತಿಗಳು ಈಗ ನನ್ನ ಮಗ 2 ನೇ ಪ್ರತಿವಾದಿ ನಿಶಾಂತ್ ರವರ ಹೆಸರಿನಲ್ಲಿ ಇದೆ. ನ್ಯಾಯಾಲಯದಲ್ಲಿ ಈ ದಾವ ಚಾಲ್ತಿ ಇರುವಾಗ ನಾವು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

**ಸಾಕ್ಷಿಗೆ ಈಗ ಸ ನಂ 1/5 ರ ಪಹಣಿಯನ್ನು ಮತ್ತು ಮ್ಯೂಟೇಷನ್ ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿ ಪಿ 16 ಮತ್ತು 17 ಎಂದು ಗುರುತಿಸಲಾಯಿತು.** ಬಸವರಾಜು, ಪಿ ಎಸ್ ಐ ರವರು ನನ್ನ ಮತ್ತು ವಾದಿಯ ವಿರುದ್ದ ತಹಸೀಲ್ದಾರ ನ್ಯಾಯಾಲಯದಲ್ಲಿ ಶಾಂತಿ ಭಂಗ ಮಾಡಬಾರದು ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಅದು ನಿ ಡಿ 1 ಆಗಿರುತ್ತದೆ ಎಂದರೆ ಸರಿ. **ಸಾಕ್ಷಿಗೆ ಈಗ ದಿಃ 21.12.2021 ರ ಆದೇಶದ ಪ್ರತಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ಅದನ್ನು ನಿ ಪಿ 18 ಎಂದು ಗುರುತಿಸಲಾಯಿತು.** ಮೂಲ ದಾಖಲಾತಿಯಲ್ಲಿ ಯಾವುದೇ ಸಹಿ ಇಲ್ಲದೇ ಇದ್ದರೂ ನಿ ಡಿ 1 ರಲ್ಲಿ ವಾದಿಯ ಸಹಿ ಮಾತ್ರ ಇರುತ್ತದೆ ಎಂದು ಸೃಷ್ಠಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಪ್ರಜ್ವಲ ಎಂಬುವವರು ನನ್ನ ಮಗಳ ಗಂಡ ಇರುತ್ತಾರೆ. ಅವರು ಪುರಸಭೆ ಸದಸ್ಯರಾಗಿರುತ್ತಾರೆ ಎಂದರೆ ಸರಿ. ಅವರು ರಾಜಕೀಯ ಪಕ್ಷದ ಮುಂಖಡರು ಎಂದರೆ ಸರಿ. ಸಕಲೇಶಪುರ ನಗರ ಠಾಣೆಯಲ್ಲಿ ನನ್ನ ಮತ್ತು ನನ್ನ ಕುಟುಂಬ ಪ್ರಜ್ವಲ ರವರ ವಿರುದ್ದ ಮೊ ನಂ 43/2023 ರಂತೆ ದಾಖಲು ಮಾಡಿರುತ್ತಾರೆ ಎಂದರೆ ಸರಿ. **ಸಾಕ್ಷಿಗೆ ಈಗ ಪ್ರ ವ ವ ಯನ್ನು ಮತ್ತು ಆದೇಶ ಪುಟದ ದೃಡೀಕೃತ ನಕಲನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ಅದನ್ನು ನಿ ಪಿ 19 ಎಂದು ಗುರುತಿಸಲಾಯಿತು.** ಸಾಕ್ಷಿ ಮುಂದುವರೆದು ನಾವು ಸಹ ದೂರು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನಗರ ಪೊಲೀಸ ಠಾಣೆಯಲ್ಲಿ ನನ್ನನ್ನು ಕರೆಸಿ ಗಲಾಟೆ ಮಾಡಿಕೊಳ್ಳಬಾರದು ಎಂದು ತಿಳಿಸಿ ಹಿಂಬರಹ ನೀಡಿರುತ್ತಾರೆ ಎಂದರೆ ಸಾಕ್ಷಿ ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಬಗೆಹರಿಸಿಕೊಳ್ಳಿ

ಎಂದು ತಿಳಿಸಿರುತ್ತಾರೆ. ನ್ಯಾಯಾಲಯದಿಂದ ಸರ್ವೆಯಾದ ನಂತರ ನಾನು ಬೇರೆ ಸರ್ವೆ ಸಹ ಮಾಡಿಸಿರುತ್ತೇನೆ. ಆದರೆ ದಿನಾಂಕ ನೆನಪಿಲ್ಲ. ಸದರಿ ನಿ ಡಿ 3 ಮಾಡುವ ಪೂರ್ವದಲ್ಲಿ ವಾದಿಗೆ ನೋಟೀಸ ಕಳುಹಿಸಿರುತ್ತೇವೆ. ನೋಟೀಸ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವುದೇ ನೋಟೀಸನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ನೋಟೀಸ ಕಳುಹಿಸಿಲ್ಲ ಎಂದರೆ ಸರಿಯಲ್ಲ. ವಾದಿ ಜೊತೆ ಅಕ್ಕಪಕ್ಕದವರಿಗೂ ನೋಟೀಸ ನೀಡಿರುತ್ತೇವೆ. ನಿ ಡಿ 3 ರಂತೆ ಸರ್ವೆ ಮಾಡಿ ಗ್ರಾಮಸ್ಥರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನ್ಯಾಯಾಲಯದ ಸರ್ವೆಯಾದ ನಂತರ ಯಾವುದೇ ಸರ್ವೆಯಾಗದೇ ಇದ್ದರೂ ನಾನು ಅದನ್ನು ಸೃಷ್ಠಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿ ಡಿ 3 ಕ್ಕೂ ಈ ದಾವೆಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ಸ ನಂ 3/2 ರಲ್ಲಿ 1 ಎಕರೆ 5 ಗುಂಟೆ ಜಮೀನನ್ನು 20.07.1999 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಕ್ರಯದ ಸಮಯದಿಂದ ಈವರೆಗೂ ಸದರಿ ಜಮೀನಿನ ಸ್ವಾಧೀನದಲ್ಲಿ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/–

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**